1435 (1670) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಗಂಟೆಗಳ ಕಾಲ ರೈತರ ಪಂಪ್‌ಸೆಟ್‌ಗಳಿಗೆ ನಿರಂತರವಾಗಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ,

ಆ) ನಿರಂತರ ವಿದ್ಯುತ್ ಸರಬರಾಜಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು,

ಇ) ವಿದ್ಯುತ್ ಸಮಸ್ಯೆ ಬೇಸಿಗೆ ಕಾಲದಲ್ಲಿ ಎದುರಾಗಬಹುದಾದ ಪ್ರಮಾಣ ಎಷ್ಟು,

ಈ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು,

ಉ) ಅಧಿಕವಾಗಿರುವ ಹಿಂದುಳಿದ ಜಿಲ್ಲೆಗಳಲ್ಲಿನ ವಿದ್ಯುತ್ ಸಮಸ್ಯೆಯನ್ನು ಹೋಗಲಾಡಿಸಲು ಬೀದಿ ದೀಪಗಳಿಗೆ ಅಸಂಪ್ರದಾಯಿಕ ಇಂಧನವಾದ ಸೋಲಾರ್ ವಿದ್ಯುತ್ ಅಳವಡಿಸಿ ವಿದ್ಯುತ್ ಉಳಿಸುವ ದಿಸೆಯಲ್ಲಿ ಸರ್ಕಾರ ಈವರೆಗೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಪಂಪುಸೆಟ್ಟುಗಳಿಗೆ ಪ್ರತಿ ದಿನ ಸಾಮಾನ್ಯವಾಗಿ 9 ಗಂಟೆಗಳ ಅವಧಿಗೆ ಮೂರು ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ

ಆ) ರಾಜ್ಯವು ಎದುರಿಸುತ್ತಿರುವ ವಿದ್ಯುತ್ ಕೊರತೆಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್ ನಿರ್ವಹಣೆ ಅನಿವಾರ್ಯವಾಗಿರುತ್ತದೆ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ದೀರ್ಘಕಾಲಿಕ ಕ್ರಮವಾಗಿ ಹಲವಾರು ಹೊಸ ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಕಾರ್ಯ ಯೋಜನೆಯನ್ನು ಹಮ್ಮಿಕೊಂಡಿದ್ದು, ವಿವರಗಳು ಈ ಕೆಳಕಂಡಂತಿದೆ

1 500 ಮೆ ವಾಟ್ ಸಾಮರ್ಥ್ಯದ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಕಾಮಗಾರಿಯ ಭರದಿಂದ ಸಾಗುತ್ತಿದೆ

2 ವರಾಹಿ ಜಲ ವಿದ್ಯುತ್ ಯೋಜನೆಯ 230 ಮೆ ವ್ಯಾಟ್ ಸಾಮರ್ಥ್ಯದ 2ನೇ ಹಂತ ಕಾಮಗಾರಿಯು ಪ್ರಗತಿಯಲ್ಲಿದೆ

3 ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ ಘಟಕ 8 (250 ಮೆಗಾವ್ಯಾಟ್) ಮೆ ಬಿ ಹೆಚ್ ಇ ಎಲ್ ರವರಿಗೆ ಕಾಮಗಾರಿಗಳಿಗಾಗಿ ಅನುಮತಿ ಪತ್ರ ನೀಡಲಾಗಿದ್ದು, ಪರಿಸರ ಮತ್ತು ಅರಣ್ಯ ಸಚಿವಾಲಯದ ಒಪ್ಪಿಗೆ ದೊರೆತ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು

4 ನಾಗಝರಿ ವಿದ್ಯುದಾಗಾರದ 4, 5 ಮತ್ತು 6ನೇ ಘಟಕಗಳನ್ನು 135 ಮೆಗಾವ್ಯಾಟ್ ನಿಂದ 150 ಮೆಗಾವ್ಯಾಟ್ ಗಳಿಗೆ ಉನ್ನತೀಕರಣಗೊಳಿಸುವ ಕೆಲಸವನ್ನು 2007ರ ವೇಳೆಗೆ ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು

5 ಖಾಸಗಿ ವಲಯದಲ್ಲಿ ನಾಗಾರ್ಜುನ ಪವರ್ ಕಾರ್ಪೋರೇಷನ್ ಕಂಪನಿ ಸಂಸ್ಥೆಯು ಮಂಗಳೂರು ಬಳಿ ಸ್ಥಾಪಿಸುತ್ತಿರುವ 1015 ಮೆ ವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರದ ಕಾಮಗಾರಿಯು ಪ್ರಾರಂಭದ ಹಂತದಲ್ಲಿದೆ

6 ಕರ್ನಾಟಕ ಸರ್ಕಾರವು 11 ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ರಾಜ್ಯದ ಹಲವೆಡೆ ಒಟ್ಟು 4000 ಮೆ ವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳ ನಿರ್ಮಾಣ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ತನ್ನ ದಿನಾಂಕ 13–7–2006ರ ಆದೇಶದ ಮೂಲಕ ನಿಯೋಜಿಸಿದೆ

7 ತಲಾ 1000 ಮೆಗಾವ್ಯಾಟ್‌ಗಳಂತೆ ಒಟ್ಟು 3000 ಮೆಗಾವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಯೋಜನೆಗಳನ್ನು ಮೈಸೂರು ಜಿಲ್ಲೆಯ ಚಾಮಲಾಪುರದಲ್ಲಿ, ಬೆಳಗಾವಿ ಜಿಲ್ಲೆಯ ಘಟಪ್ರಭಾದಲ್ಲಿ ಹಾಗೂ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿಯಲ್ಲಿ ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಸ್ಥಾಪಿಸಲು ಉದ್ದೇಶಿಸಲಾಗಿದ್ದು, "ಆಸಕ್ತಿ ವ್ಯಕ್ತಪಡಿಸುವಿಕೆ" (expression of interest) ಯನ್ನು ಆಹ್ವಾನಿಸಲಾಗಿದೆ

8 ಮಧ್ಯಮ ಹಾಗೂ ದೀರ್ಘಾವಧಿಗೆ ಅನುಕ್ರಮವಾಗಿ 1,500 ಮೆ ವ್ಯಾಟ್ ಮತ್ತು 2,500 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ತನ್ನು ಸರಬರಾಜು ಮಾಡಲು ವಿದ್ಯುತ್ ಉತ್ಪಾದಕರು/ವಿದ್ಯುತ್ ವಹಿವಾಟು ನಡೆಸುವ ಸಂಸ್ಥೆಗಳಿಂದ "ಆಸಕ್ತಿ ವ್ಯಕ್ತಪಡಿಸುವಿಕೆ" ಯನ್ನು ಆಹ್ವಾನಿಸಲಾಗಿದೆ

9 ಕೇಂದ್ರ ಸರ್ಕಾರದ ವತಿಯಿಂದ ತದ್ರಿ, ರತ್ನಗಿರಿ, ಕೃಷ್ಣಾಪಟ್ಟಂ ಮತ್ತು ಚೀಯೂರುಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಅಲ್ಟ್ರಾ ಮೆಗಾ ಪವರ್ ಪ್ರಾಜೆಕ್ಟ್‌ಗಳಿಂದ ಅನುಕ್ರಮವಾಗಿ 1,500 ಮೆ ವ್ಯಾಟ್, 500 ಮೆ ವ್ಯಾಟ್, 800 ಮೆ ವ್ಯಾಟ್ ಮತ್ತು 800 ಮೆ ವ್ಯಾಟ್ ವಿದ್ಯುತ್‌ನ್ನು ರಾಜ್ಯ ತನ್ನ ಪಾಲಾಗಿ ಪಡೆಯಲು ಬದ್ಧವಾಗಿರುತ್ತದೆ

ಮುಂಬರುವ 3–4 ವರ್ಷಗಳಲ್ಲಿ ರಾಜ್ಯದ ವಿದ್ಯುತ್ ವ್ಯವಸ್ಥೆಗೆ ಸುಮಾರು 3000 ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಉತ್ಪಾದನೆಯನ್ನು ಸೇರ್ಪಡೆಗೊಳಿಸಲು ರಾಜ್ಯ ಸರ್ಕಾರವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಈ ಪ್ರಯತ್ನ ಸಾಕಾರಗೊಂಡು, ರಾಜ್ಯವು ಎದುರಿಸುತ್ತಿರುವ ವಿದ್ಯುತ್ ಅಭಾವದ ಪರಿಸ್ಥಿತಿಯಲ್ಲಿ ಗಣನೀಯ ಸುಧಾರಣೆ ಉಂಟಾಗುತ್ತದೆ ಯೆಂದು ನಿರೀಕ್ಷಿಸಲಾಗಿದೆ

ಇ) ಬೇಸಿಗೆ ಕಾಲ ಮತ್ತು ಬರಗಾಲ ಪರಿಸ್ಥಿತಿಯಿಂದ ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ದಿನೇ ದಿನೇ ಹೆಚ್ಚುತ್ತಿದೆ ದಿನಾಂಕ 06–03/2007 ರಂದು 135 88 ದಶಲಕ್ಷ ಯೂನಿಟ್‌ಗಳ ಗರಿಷ್ಠ ವಿದ್ಯುತ್ ಬಳಕೆ ದಾಖಲಾಗಿರುತ್ತದೆ ಕಳೆದ ಬೇಸಿಗೆಯ ಸಮಯದಲ್ಲಿ ದಿನಾಂಕ 26–03–2006 ರಂದು ದಾಖಲಾದ ಗರಿಷ್ಠ ವಿದ್ಯುತ್ ಬಳಕೆ 126 6 ದಶಲಕ್ಷ ಯೂನಿಟ್ಟುಗಳು ಅಂದರೆ ಶೇ 7 33 ರಷ್ಟು ಹೆಚ್ಚಳಗೊಂಡಿರುತ್ತದೆ

ಈ) ರಾಜ್ಯವು ಪ್ರಸ್ತುತ ಅನುಭವಿಸುತ್ತಿರುವ ವಿದ್ಯುತ್ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವ ಉದ್ದೇಶದಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

1 ಎಲ್ಲಾ ಸ್ವತಂತ್ರ ವಿದ್ಯುತ್ ಉತ್ಪಾದಕರುಗಳಿಗೆ ಉತ್ಪಾದಿಸಲಾಗುತ್ತಿರುವ ವಿದ್ಯುತ್ತನ್ನು ರಾಜ್ಯದ ಗ್ರಿಡ್‌ಗೆ ರವಾನಿಸುವಂತೆ ಸೂಚನೆಯನ್ನು ನೀಡಲಾಗಿರುತ್ತದೆ

2 ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯದ ಪಾಲನ್ನು ಪೂರ್ಣ ಪ್ರಮಾಣದಲ್ಲಿ ಪಡೆಯುವುದು

3 ಕೇಂದ್ರ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಹೆಚ್ಚುವರಿ ವಿದ್ಯುತ್ ಒದಗಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲಾಗಿದೆ

4 ವಿದ್ಯುತ್ ವಾಣಿಜ್ಯ ವಹಿವಾಟು ನಡೆಸುವ ವಿವಿಧ ಸಂಸ್ಥೆಗಳಿಂದ ವಿದ್ಯುತ್ ಪಡೆಯಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ

5 ಬೃಹತ್ ಕೈಗಾರಿಕೆಗಳ ಕ್ಯಾಪ್ಟೀವ್ ಪವರ್ ಪ್ಲಾಂಟ್‌ಗಳಿಂದ ಹೆಚ್ಚುವರಿ ವಿದ್ಯುತ್ತನ್ನು ಪಡೆಯಲು ಪ್ರಯತ್ನಗಳನ್ನು ನಡೆಸಲಾಗುತ್ತಿದೆ

ಊ) ನವ ಹಾಗೂ ನವೀಕರಿಸಬಹುದಾದ ಇಂಧನ ಸಚಿವಾಲಯ, ನವದೆಹಲಿಯು 'ಸೋಲಾರ್ ಫೋಟೋವೋಲ್ಟಾಯಿಕ್' ಎಂಬ ರಾಷ್ಟ್ರೀಯ ಕಾರ್ಯಕ್ರಮದಡಿಯಲ್ಲಿ ಪ್ರತಿ ವರ್ಷವೂ ನಿಗದಿತ ಸಂಖ್ಯೆಯಲ್ಲಿ ಸೋಲಾರ್ ಮನೆದೀಪ ಹಾಗೂ ಸೋಲಾರ್ ಬೀದಿ ದೀಪಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡುತ್ತಿದೆ ಈ ಕಾರ್ಯಕ್ರಮದಡಿಯಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ರವರು ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ಹಳ್ಳಿಗಳಿಗೆ ಸೋಲಾರ್ ಮನೆದೀಪ ಹಾಗೂ ಸೋಲಾರ್ ಬೀದಿ ದೀಪ ವ್ಯವಸ್ಥೆಗಳನ್ನು ಅಳವಡಿಸುವುದರ ಮುಖಾಂತರ 14 ಸೋಲಾರ್ ಗ್ರಾಮಗಳನ್ನು ರಚಿಸಿದೆ ಹಾಗೂ 2005–06ನೇ ಸಾಲಿನಲ್ಲಿ ಎಂ ಎನ್ ಆರ್ ಇ , ನವದೆಹಲಿಯ 'ಗ್ರಾಮೀಣ ವಿದ್ಯುದ್ದೀಕರಣ' ಯೋಜನೆಯಡಿಯಲ್ಲಿ 16 ಹಳ್ಳಿಗಳನ್ನು ಸೋಲಾರ್ ಮೂಲಕ ವಿದ್ಯುದ್ದೀಕರಿಸಲಾಗಿದೆ

ಇದರೊಂದಿಗೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ (ಆರ್ ಡಿ ಪಿ ಆರ್) ಅಡಿಯಲ್ಲಿ ಸಮಗ್ರ ಗ್ರಾಮೀಣ ಇಂಧನಾಭಿವೃದ್ಧಿ ಬ್ಲಾಕ್‌ಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ರಚಿಸಲಾಗಿದ್ದು, ಅವುಗಳ ಮುಖಾಂತರ ಸೋಲಾರ್ ಬೀದಿ ದೀಪ ವ್ಯವಸ್ಥೆಗಳನ್ನು ಹಳ್ಳಿಗಳಲ್ಲಿ ಅಳವಡಿಸಲು ಉದ್ದೇಶಿಸಿದೆ